ಅನುಬಂಧ–I

ಕರ್ನಾಟಕ ರಾಜ್ಯ ಜಿಲ್ಲಾವಾರು ಅಂಗನವಾಡಿಗಳ ಸಂಖ್ಯೆ

ಕ್ರಮ ಸಂಖ್ಯೆ	ಜಿಲ್ಲೆ	ಪುಂಜೂರಾದ ಅಂಗನವಾಡಿಗಳ ಸಂಖ್ಯೆ	ಅಲ್ಪ ಸಂಖ್ಯಾತರು ಹೆಚ್ಚು ವಾಸಿಸುವ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿಗಳ ಸಂಖ್ಯೆ
೧	ಬೆಂಗಳೂರು ನಗರ	೩೩೭	೧೧೧
೨	ಬೆಂಗಳೂರು ಗ್ರಾಮಾಂತರ	೪೦೦	೫೦
೩	ಬೀದರ್	೮೪೮	೧೧೪
೪	ಬಳ್ಳಾರಿ	೬೩೩	೧೭
೫	ಬಿಜಾಪುರ	೮೩೦	೨೯
೬	ದಕ್ಷಿಣ ಕನ್ನಡ	೯೧೭	೧೧೦
೭	ಉತ್ತರ ಕನ್ನಡ	೩೭೭	೬೫
೮	ಚಿಕ್ಕಮಗಳೂರು	೩೧೩	೪೪
೯	ಧಾರವಾಡ	೧೩೮೭	೩೮೧
೧೦	ಶಿವಮೊಗ್ಗ	೮೮೭	೪೨
೧೧	ತುಮಕೂರು	೮೫೦	೬
೧೨	ಮಂಡ್ಯ	೫೮೬	೧೫
೧೩	ಬೆಳಗಾಂ	೧೩೫	೩೪
೧೪	ಗುಲ್ಬರ್ಗ	೧೦೩೯	೧೦೮
೧೫	ಕೊಡಗು	೩೫೭	೭೫
೧೬	ಮೈಸೂರು	೧೧೮೭	೩೧
೧೭	ಕೋಲಾರ	೮೯೫	೧೫೪
೧೮	ಹಾಸನ	೫೯೭	೧೬
೧೯	ಚಿತ್ರದುರ್ಗ	೮೭೧	೨೫
೨೦	ರಾಯಚೂರು	೫೯೨	೬
		೧೪೪೫೮	೧೪೩೩

ಭಾರತ ಸರ್ಕಾರದ ತೆಂಗು ಅಭಿವೃದ್ಧಿ ಮಂಡಳಿ ರಾಜ್ಯದಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಲು ಕೃಷಿ ಭೂಮಿ ಮೀಸಲಿಡಲು ಕೋರಿಕೆ

೩೧೭ (೩೭೬) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಭಾರತ ಸರ್ಕಾರದ ಕೃಷಿ ಸಚಿವಾಲಯದ ತೆಂಗು ಅಭಿವೃದ್ಧಿ ಮಂಡಳಿಯು ರಾಜ್ಯದಲ್ಲಿ ಸಂಶೋಧನಾ ಕೇಂದ್ರ ಸ್ಥಾಪಿಸಲು ಕೃಷಿ ಭೂಮಿಗಾಗಿ ಕೋರಿಕೆ ಸಲ್ಲಿಸಿದೆಯೇ ?

ಆ) ಹಾಗಿದ್ದಲ್ಲಿ ರಾಜ್ಯ ಸರ್ಕಾರ ಸಂಶೋಧನಾ ಕೇಂದ್ರಕ್ಕೆ ಭೂಮಿಯನ್ನು ಒದಗಿಸಲು ತೀರ್ಮಾನಿಸಿದೆಯೇ ? ಹಾಗಿದ್ದಲ್ಲಿ ಭೂಮಿಯ ವಿಸ್ತೀರ್ಣ ಹಾಗೂ ಸ್ಥಳದ ವಿವರಗಳನ್ನು ಒದಗಿಸುವುದು.

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಆ) ಹೌದು.

ಆ) ತೆಂಗು ಅಭಿವೃದ್ಧಿ ಮಂಡಳಿಯ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ರಾಯಸಮುದ್ರ, ಆವ್ಯತಮಹಲ್ ಕಾವಲ್ ಪ್ರದೇಶದಲ್ಲಿ ಸುಮಾರು ೨೮೬ ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಒದಗಿಸಲು ತಾತ್ಕಾಲಿಕವಾಗಿ ನಿರ್ಧರಿಸಲಾಗಿದ್ದು ಈ ವಿಷಯ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಪದವಿಪೂರ್ವ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು

೩೧೮ (೩೭೭) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಪದವಿ ಪೂರ್ವ (ಪ್ರಿಯೂನಿವರ್ಸಿಟಿ) ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆಯೆಷ್ಟು ?

ಆ) ಸರ್ಕಾರದವರು ನಡೆಸುತ್ತಿರುವ ಹಾಗೂ ಅನುದಾನ ಪಡೆಯುತ್ತಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಹಾಗೂ ಇರುವ ಬೋಧಕ ಸಿಬ್ಬಂದಿಯ ಸಂಖ್ಯೆ ಎಷ್ಟು ?

ಇ) ಸರ್ಕಾರವು ಪಿ.ಯು.ಸಿ. ಮಂಡಳಿಯನ್ನು ರದ್ದುಗೊಳಿಸಲು ಕಾರಣವೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

		ಹುಡುಗರು	ಹುಡುಗಿಯರು
ಅ)	ಪ್ರಥಮ ಪಿ ಯು.ಸಿ.	೧,೪೨,೯೦೭	೭೭,೭೧೨
	ದ್ವಿತೀಯ ಪಿ.ಯು.ಸಿ.	೧,೨೮,೯೬೯	೫೮,೫೨೦

ಆ) ಅನುದಾನ ಪಡೆಯುತ್ತಿರುವ ಪದವಿ ಪೂರ್ವ ಕಾಲೇಜು: ೭೮. ಸರ್ಕಾರ ನಡೆಸುತ್ತಿರುವ ಪದವಿ ಪೂರ್ವ ಕಾಲೇಜುಗಳ ಮಾಹಿತಿಯನ್ನು ಎಲ್ಲಾ ವಿಭಾಗದ ಸಹ ನಿರ್ದೇಶಕರುಗಳಿಂದ ತರಿಸ ಬೇಕಾದ ಕಾರಣ ಕಾಲಾವಕಾಶಬೇಕಾಗಿದೆ. ಇಲ್ಲಿರುವ ಬೋಧಕ ಸಿಬ್ಬಂದಿಯ ಸಂಖ್ಯೆ:೧೦೧೮.

ಇ) ರಾಷ್ಟ್ರೀಯ ಶೈಕ್ಷಣಿಕ ನೀತಿಯ ಅನ್ವಯ ಪದವಿ ಪೂರ್ವ ಶಿಕ್ಷಣವನ್ನು ಪ್ರೌಢ ಶಿಕ್ಷಣದ ವ್ಯಾಪ್ತಿಯಲ್ಲಿ ತರಲು ಉದ್ದೇಶಿಸಿರುವುದರಿಂದ ಸದರಿ ಮಂಡಳಿಯನ್ನು ರದ್ದು ಮಾಡಲು ಕ್ರಮ ತೆಗೆದುಕೊಂಡಿದೆ.

ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಕನ್ನಡ

೩೧೯ (೬೦೦) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೊಳಿಸಲು ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಆಧ್ಯತೆಯ ಮೇಲೆ ಅಧ್ಯಯನವನ್ನು ಕಡ್ಡಾಯವಾಗಿ ಮಾಡುವಂತೆ ಸರ್ಕಾರದ ನಿರ್ಣಯವನ್ನು ಜಾರಿಗೊಳಿಸಲು ಇರುವ ತಾಂತ್ರಿಕ ತೊಂದರೆಗಳೇನು ?